# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.

## ಸಿ.ಸಿ. ಸಂಖ್ಯೆ: 806/2021

**ಸಾಕ್ಷಿಯನ್ನು ದಿಃ 28.03.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಸಂತೋಷ ಕುಮಾರ .ಕೆ | ಸಿ.ಡಬ್ಲ್ಯೂಃ 2 | ಪಿ.ಡಬ್ಲ್ಯೂಃ 2 |
| ತಂದೆಯ ಹೆಸರು | ಕರಿಯಪ್ಪ | | |
| ವಯಸ್ಸು | 43 ವರ್ಷ | | |
| ಕೆಲಸ | ಕ್ಷೇತ್ರ ಸಮನ್ವಯ ಅಧಿಕಾರಿಗಳು ಹುಣಸೂರು | | |
| ವಾಸಸ್ಥಳ | ಕಟ್ಟೆಮಳಲವಾಡಿ | | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು ದಿಃ 01.06.2019 ರಿಂದ ಈವರೆಗೆ ನಾನು ಹುಣಸೂರಿನಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಸ್ಥಳ ಹಾಗೂ ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ದಿಃ 20.09.2020 ರಂದು ಮಹಜರ್ ಮಾಡಲು ನನಗೆ ದೂರವಾಣಿ ಕರೆಯನ್ನು ಚಾಸಾ-1 ರವರು ಮಾಡಿ ಬರಹೇಳಿದ್ದು ನಾನು ಠಾಣೆಗೆ ಹೋದಾಗ ಮಹಜರ್ ಗಾಗಿ ನೋಟಿಸ್ ನೀಡಿದ್ದು, ಚಾಸಾ-1 ರವರು ತಮ್ಮ ಕಛೇರಿಯ ವಾಹನದಲ್ಲಿ ನನ್ನನ್ನು ಕರೆದುಕೊಂಡು ಹುಣಸೂರು ಆರ್ ಟಿ ಓ ಕಛೇರಿ ಹತ್ತಿರ ಇದ್ದಂತಹ ಒಬ್ಬ ವ್ಯಕ್ತಿ ಉಮೇಶ್ ಅವರನ್ನು ಹಿಡಿದು ವಿಚಾರಣೆ ಮಾಡಿದರು. ಆ ಸಮಯದಲ್ಲಿ ಸದರಿ ವ್ಯಕ್ತಿ ಉಮೇಶ್ 1 ನೇ ಆರೋಪಿ ಜೇಬಿನಲ್ಲಿ ಸಣ್ಣ ಸಣ್ಣ ಒಟ್ಟು 7 ಪ್ಯಾಕೇಟ್ ಗಳು ಸಿಕ್ಕಿದ್ದು ನಂತರ ವುರದ ಪೊಠರೆಯಿಂದ ಒಟ್ಟು 13 ಸಣ್ಣ ಸಣ್ಣ 7 ಪ್ಯಾಕೇಟ್ ಗಳು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟಿದ್ದನ್ನು ವಶಪಡಿಸಿಕೊಂಡು ತೂಕ ಮಾಡಿದಾಗ ಸುಮಾರು 130 ರಿಂದ 140 ಗ್ರಾಂ ತೂಕದ ಪ್ಯಾಕೇಟ್ ಗಳು ಇದ್ದು ಅವುಗಳನ್ನು ಅಮಾನತ್ತುಪಡಿಸಿಕೊಂಡರು.

ನಂತರ ಸ್ಥಳ ಮಹಜರ್ ಅನ್ನು ಮಧ್ಯಾಹ್ನ 2.45 ರಿಂದ 3.00 ಗಂಟೆ ವರೆಗೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಆ ಸಮಯ ನನ್ನ ಜೊತೆ ಪೊಲೀಸರು ಇದ್ದರು ಅವರ ಹೆಸರು ನನಗೆ ಗೊತ್ತಿಲ್ಲ. ಚಾಸಾ-1 ರವರ ಜೊತೆ ಇನ್ನೊಬ್ಬ ಪೊಲೀಸ್ ಇದ್ದರು. ಆ ಸಮಯ ನನ್ನ ಜೊತೆ ಒಬ್ಬ ಆಟೋ ಡ್ರೈವರ್ ಇದ್ದರು ಅವರು ಸಹ ಮಹಜರ್ ಗೆ ಸಹಿ ಮಾಡಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಎನ್ ಕೆ ವಕೀಲರಿಂದಃ

ಆ ದಿನ ಚಾಸಾ–1 ರವರು ನನಗೆ ದೂರವಾಣಿ ಕರೆ ಮಾಡಿ ಮಹಜರ್ ಗೆ ಕರೆದಾಗ ನಾನು ಒಬ್ಬ ಸರಕಾರಿ ನೌಕರಸ್ಥನಾಗಿದ್ದರಿಂದ ನನ್ನ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಬರಬೇಕಾಗಿರುತ್ತದೆ ಎಂದರೆ ಸರಿ. ನನ್ನ ಮೇಲಾಧಿಕಾರಿಗಳಿಗೆ ನಾನು ದೂರವಾಣಿ ಕರೆ ಮಾಡಿ ಅನುಮತಿ ಪಡೆದಿರುತ್ತೇನೆ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನೋಟೀಸ್ ಅನ್ನು ನನಗೆ 2.15 ರಿಂದ 2.20 ರ ಒಳಗೆ ನೀಡಲಾಗಿತ್ತು. ನಾನು ನೋಟೀಸ್ ಪಡೆದ ನಂತರ ಅದರಲ್ಲಿ ಸಮಯ ನಮೂದು ಮಾಡಿಲ್ಲ.

ಆ ದಿನ ನಾವು ಠಾಣೆಯಿಂದ ಘಟನಾ ಸ್ಥಳಕ್ಕೆ ಮಧ್ಯಾಹ್ನ 2.35– 2.40 ಗಂಟೆ ಆಗಿತ್ತು. ನಾವು ಅಲ್ಲಿ ಹೋದಾಗ ತಲಾ ಪ್ಯಾಕೇಟ್ 8 ರಿಂದ 10 ಗ್ರಾಂನವಾಗಿದ್ದವು. ಸದರಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲ 1 ಕೆ ಜಿ ಗಾತ್ರ ದ್ದಾಗಿತ್ತು ಸದರಿ ಕವರ್ ಬಿಟ್ಟರೆ ಅಲ್ಲಿ ಬೇರೆ ಯಾವುದೇ ಕವರ್ ಇರಲಿಲ್ಲ. ನಿಪಿ.2 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.ಠಾಣೆಯಿಂದ ಘಟನಾ ಸ್ಥಳಕ್ಕೆ ಹೋಗಲು 8–10 ನಿಮಿಷಗಳ ಕಾಲ ಬೇಕಾಗುತ್ತದೆ.

ಆ ದಿನ ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಪೊಲೀಸರ ಪ್ರಕರಣಕ್ಕೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**2** ನೇ ಆರೋಪಿ ಪರ ವಕೀಲರಾದ ಕೆ.ಬಿ ಅವರು ಮೇಲೆ ಹೇಳಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.